ಮಾಡಿದ್ದೇನು? ರಾಮಚಂದ್ರನ್ ಒಂದೇ ಒಂದು ಬೆರಳನ್ನು ಎತ್ತಿ ತೋರಿಸಿದ್ದ ಆದರೆ ವಿಶ್ವ ತನ್ನ ಐದೂ ಬೆರಳುಗಳನ್ನು ಬಳಸಿ, ನರ್ಸ್ ಎಮಿಲಿಯ ಅಂಡನ್ನು ಹಿಡಿದು ಹಿಚುಕಿಬಿಟ್ಟಿದ್ದ!

★★★

ಚಳಿಗಾಲ ಶುರುವಾಯ್ತೆಂದರೆ ಇಂಗ್ಲೆಂಡಿನಲ್ಲಿ ಕತ್ತಲೆಯ ಸಮಯ ಜಾಸ್ತಿಯಾಗುತ್ತ ಹೋಗುತ್ತದೆ. ದರಿದ್ರ ಚಳಿ. ಹಗಲಿನಲ್ಲೂ ವಿದ್ಯುತ್ ಲೈಟುಗಳ ಬೆಳಕಲ್ಲಿ ಕೆಲಸಮಾಡಬೇಕು.

ಇಂಗ್ಲಿಷರಂತೆ 'ಸ್ನೋ ಸ್ಕೀಯಿಂಗ್' ಅಂತ ಹೋಗಲು ವಿಶ್ವನಿಗೆ ಅದು ಬರುತ್ತಿರಲಿಲ್ಲ. 'ಕ್ರಿಸ್ಮಸ್' ಎಂದು ಸಡಗರವಿರಲಿಲ್ಲ. ಚೊಚ್ಚಲ ಹೆರಿಗೆಗೆ ಹೆಂಡತಿ ಮೈಸೂರಿಗೆ ಹೋಗಿ ಬೆಚ್ಚಗಿದ್ದಳು. ಆಸ್ಪತ್ರೆಯವರೆಲ್ಲ ಕ್ರಿಸ್ಮಸ್ ಪಾರ್ಟಿಗೆ ಬಾ ಅಂತ ಕರೆದಾಗ ಒಪ್ಪಿ ಹೋಗಿದ್ದ. ಪಾರ್ಟಿಯಿದ್ದುದು ಶನಿವಾರ. ಭಾನುವಾರವೂ ರಜೆಯಿತ್ತು. ಹಾಗಾಗಿ ಮಾಡಬೇಕಾದ ಕೆಲಸವನ್ನೆಲ್ಲ ಭಾನುವಾರ ಮಾಡಬಹುದೆಂದು ನಿರ್ಧರಿಸಿದ್ದ.

ಪಾರ್ಟಿಯಿದ್ದ ಹೋಟೆಲಿಗೆ ಹೋದಾಗ ರಾತ್ರಿ ಏಳು ಗಂಟೆ. ಹೋದವನು ದಂಗಾಗಿ ಹೋಗಿದ್ದ. ಯೂನಿಫಾರ್ಮಿನಲ್ಲಿ ಮಾತ್ರ ಕಾಣುತ್ತಿದ್ದ ಎಲ್ಲ ಕಿರಿಯ ಮತ್ತು ಹಿರಿಯ ನರ್ಸ್‌ಗಳು ಮೋಟು ಸ್ಕರ್ಟ್ ತೊಟ್ಟು ಜಗ ಮಗಿಸುವ ಬಟ್ಟೆಗಳಲ್ಲಿ ಬಂದಿದ್ದರು. ಕೆಲವರನ್ನು ಅವರ ಮೇಕಪ್ಪಿನಲ್ಲಿ ಗುರುತಿಸುವುದೇ ಕಷ್ಟವಾಗುತ್ತಿತ್ತು. ಹೋಟೆಲಿಗೆ ಬರುವ ಮುನ್ನವೇ ಒಂದು ಮನೆಯಲ್ಲಿ ಸೇರಿ ಒಂದಷ್ಟು ಕುಡಿದೇ ಬಂದಿದ್ದರು. ಅಂತಹ ಕಡು ಚಳಿಯಲ್ಲೂ ತುಂಡು ಬಟ್ಟೆ ಅವರಿಗೆ ಹೇಗೆ ರಕ್ಷಣೆ ಕೊಡುತ್ತಿತ್ತೋ ವಿಶ್ವನಿಗೆ ತಿಳಿಯಲಿಲ್ಲ.

ಕುಡಿದು ತಯಾರಾಗಿ ಬಂದವರು, ಹೋಟೆಲಿಗೆ ನೇರವಾಗಿ ಬಂದು ಸೇರಿದ್ದವರನ್ನು ಅಪ್ಪಿ ಮುತ್ತಿಟ್ಟರು. ಪಾರ್ಟಿ ಹಾಲಿನಲ್ಲಿ ಡ್ಯಾನ್ಸ್ ಫ್ಲೋರ್ ಇವರಿಗಾಗಿ ಕಾದಿತ್ತು. ಅದನ್ನು ಹತ್ತಿದವರೇ ಕುಣಿಯತೊಡಗಿದರು. ನಿಧಾನಕ್ಕೆ ಸ್ಟಾರ್ಟರ್ಸ್ ಬಂತು. ವಿಶ್ವ ಸಸ್ಯಾಹಾರಿ ಊಟ ಹೇಳಿದ್ದ. ರುಚಿಯೇ ಇಲ್ಲದ ಏನನ್ನೋ ತಿಂದು ಮುಗಿಸಿದ. ಕುಡಿಯುವಷ್ಟು ಕೆಂಪು ಮತ್ತು ಬಿಳಿ ವೈನ್‌ಗಳು, ರೋಸೆ ಎಲ್ಲ ಟೇಬಲಿನ ಮೇಲಿದ್ದವು. ಇವನು ಡ್ರೈವ್ ಮಾಡುತ್ತಿದ್ದ ಕಾರಣ ಒಂದು ಪೆಗ್ ವೈನ್‌ಗಿಂತ ಹೆಚ್ಚು ಕುಡಿಯುವಂತಿರಲಿಲ್ಲ. ವಿಶ್ವ ಕುಡಿಯುವವನೂ ಅಲ್ಲ. ಆಗೀಗ ಒಂದು ಸಿಪ್ ಕುಡಿದವನಂತೆ ಮಾಡಿ ಒಂದರ್ಧ ಗಂಟೆ ಕಳೆಯತೊಡಗಿದ.

ಇದೀಗ ಪೂರ್ತಿ ಸ್ವಿಂಗಿನಲ್ಲಿ ನರ್ತನ ಶುರುವಾಯ್ತು. ಡಿ.ಜೆ. ತಾಳಕ್ಕೆ ಹೊಂದುವ ಹಾಡುಗಳನ್ನು ಹಾಕತೊಡಗಿದ. ಗೊತ್ತಿರುವವರು, ಗೊತ್ತಿಲ್ಲದವರು ಎಲ್ಲ ಒಟ್ಟಿಗೆ ಸಂತೋಷವಾಗಿ ಕುಣಿಯತೊಡಗಿದರು. ಪಕ್ಕದ ಟೇಬಲಿನ ಅಪರಿಚಿತನೊಬ್ಬ ಡುಮ್ಮಗಿದ್ದ ಸೆಕ್ರೆಟರಿ ವಿಕ್ಕಿಯನ್ನು ಮಾತಾಡಿಸಿದ. ಬಲವಾಗಿ ತಬ್ಬಿ ಕೆನ್ನೆಯ ಮೇಲೆ ಲೊಚಕ್ಕೆಂದು ಮುತ್ತಿಟ್ಟುಬಿಟ್ಟ. ಅವಳೇನು ಸಂಕೋಚಪಡಲಿಲ್ಲ. ಅವನು ಮತ್ತೆಮತ್ತೆ ಟೇಬಲಿಗೆ ಬಂದು ಹುಡುಗಿಯರಿಗೆ ಲೈನ್ ಹೊಡೆಯುತ್ತಿದ್ದ. ಹುಡುಗಿಯರ ಕೈ ಹಿಡಿದು 'ಹಲೋ' ಅಂತ ಹೇಳಿದ್ದೇ ತನ್ನ ಪದವಿ ಕಾಲೇಜಿನ ದಿನಗಳಲ್ಲಿ ಅಂತ ನೆನೆದು ವಿಶ್ವನಿಗೆ ನಗು ಬಂತು.

ಸಹೋದ್ಯೋಗಿಗಳು ಡ್ಯಾನ್ಸ್ ಮಾಡಲು ವಿಶ್ವನನ್ನೂ ಕರೆದರು, ನರ್ಸ್‌ಗಳು ಬಂದು ಕೈ ಹಿಡಿದು ಎಳೆದರು. ಭಾರತದಲ್ಲಿದ್ದಾಗ ಇವನೇ ತನ್ನ ತರಗತಿಯಲ್ಲಿ ಸುಂದರ. ಎತ್ತರವಾಗಿದ್ದ ವಿಶ್ವ ತನ್ನ ದೇಹವನ್ನು ಅಂದವಾಗಿ ಆಕಾರ ಕಳೆದುಕೊಳ್ಳದಂತೆ ಇಟ್ಟುಕೊಂಡಿದ್ದ. ಆದರೆ, ಕಾಲೇಜಿನಲ್ಲಿದ್ದಾಗ ಕಲಿತ ದೊಂಬರ ಕುಣಿತದ ನಡೆಗಳನ್ನು ಬಿಟ್ಟರೆ ಅವನಿಗೆ ನರ್ತಿಸಲು ಬರುತ್ತಿರಲಿಲ್ಲ. ಹಾಗಾಗಿ ಸಂಕೋಚಪಡತೊಡಗಿದ. ಕೊನೆಗೆ ಅವರಿವರ ಬಲವಂತ ತಡೆಯಲಾಗದೆ ಎದ್ದು ಹೋಗಿ ವನೆದಾಡಿ ಬಂದ. ಇತರರು ಇವನನ್ನು ಪ್ರೋತ್ಸಾಹಿಸಿ ಸಿಳ್ಳೆ ಹೊಡೆದರು. ವಿಶ್ವನಿಗೂ ತನ್ನ ಮೈ ಸ್ವಲ್ಪ